


# ಗಜ ಗ್ರಾಮ

**ಮನೋಹರ ಕೋಟೆಗಳಿಂದ ಆವೃತವಾಗಿರುವ ರಾಜಸ್ಥಾನದಲ್ಲಿನ 'ಹಾಥಿ ಗಾಂವ್' ಆನೆಗಳ ಪ್ರಪಂಚವನ್ನು ಪರಿಚಯ ಮಾಡಿಕೊಡುತ್ತದೆ.**

■ ಶ್ರೀನಿವಾಸ ಮೂರ್ತಿ ಎನ್.ಎಸ್.

ರಾಜಸ್ಥಾನ ಎಂದೊಡನೆ ನೆನಪಾಗುವುದು ಭವ್ಯವಾದ ಕೋಟೆಗಳು. ರಾಜ್ಯದುದ್ದಕ್ಕೂ ಹರಡಿಕೊಂಡಿರುವ ಕೋಟೆಗಳಲ್ಲಿ ಮುಖ್ಯವಾದುದು ರಾಜಧಾನಿ ಜೈಪುರ ಸಮೀಪದ ಅಂಬರ್ ಕೋಟೆ. ಸುಂದರವಾದ, ವಿಸ್ತಾರವಾದ ಈ ಕೋಟೆ ಎಷ್ಟು ಪ್ರಸಿದ್ಧಿಯೋ ಅಲ್ಲಿನ ಆನೆಯ ಉತ್ಸವವೂ ಅಷ್ಟೇ ಪ್ರಸಿದ್ಧಿ. ಉತ್ಸವದಲ್ಲಿ ಸಂಜೆಯ ರವಿಯ ಹೊಂಬೆಳಕಲ್ಲಿ ಸಾಗುವ ಆನೆಗಳ ಮೆರವಣಿಗೆಯ ಕಲಾತ್ಮಕ ದೃಶ್ಯ ಕಣ್ಣಲ್ಲಿ ಅಚ್ಚೊತ್ತುವಂತಿರುತ್ತದೆ.

ಉತ್ಸವದ ಹೊರತಾಗಿ ಉಳಿದ ದಿನಗಳಲ್ಲಿ ಈ ಆನೆಗಳು ಎಲ್ಲಿರುತ್ತವೆ ಎಂದು ಹುಡುಕಲು ಹೊರಟ ನಮಗೆ ಸಿಕ್ಕಿದ್ದೇ ಈ ಗ್ರಾಮ.

ಅಂಬರ್ ಕೋಟೆಯಿಂದ 4 ಕಿ.ಮೀ. ಅಂತರದಲ್ಲಿರುವ ಈ ಗ್ರಾಮದ ಹೆಸರು 'ಹಾಥಿ ಗಾಂವ್'. ಆನೆಗಳಿಗೆಂದೇ ಮೀಸಲಿರುವ ಭಾರತದ ಮೊದಲ ಗ್ರಾಮ ಇದು ಎನ್ನಬಹುದು. 100ಕ್ಕೂ ಅಧಿಕ ಆನೆಗಳನ್ನು ಇಲ್ಲಿ ಸಾಕಲಾಗಿದ್ದು, ಅರಣ್ಯ ಇಲಾಖೆ, ಜೈಪುರ ಅಭಿವೃದ್ಧಿ ಪ್ರಾಧಿಕಾರ ಮತ್ತು ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಒಂದು ಗ್ರಾಮವನ್ನೇ ಆನೆಗಳಿಗಾಗಿ ಮೀಸಲಿಡಲಾಗಿದೆ. ಸುಮಾರು 31 ಹೆಕ್ಟೇರ್ ವ್ಯಾಪ್ತಿಯಲ್ಲಿ ಸರ್ಕಾರದ ಮಾನದಂಡದ ಅನುಸಾರ ಗ್ರಾಮವನ್ನು ನಿರ್ಮಿಸಲಾಗಿದೆ.

ಇದು ಆನೆಗಳನ್ನು ಸಾಕುವ ಕೇಂದ್ರದಂತಿರದೇ – ಆನೆಗಳ ಮುಕ್ತ ಸಂಚಾರ ವಿಹಾರಕ್ಕೆ ಹೇಳಿ ಮಾಡಿಸಿದಂತಿದೆ; ವಿಶಾಲವಾದ ಸ್ಥಳ, ಕೊಳಗಳು, ಆಹಾರ, ವೈದ್ಯಕೀಯ, ಇತರೆ ಸೌಲಭ್ಯಗಳನ್ನು ಹೊಂದಿದೆ. 'ಆನೆ ಕಲ್ಯಾಣ ಸಂಘ' ಈ ಗ್ರಾಮವನ್ನು ನಿರ್ವಹಣೆ ಮಾಡುತ್ತಿದೆ. ಮಾವುತರು ಮತ್ತು ಅವರ ಕುಟುಂಬ ಉಳಿಯಲು ಇಲ್ಲಿಯೇ ಅವಕಾಶ ಕಲ್ಪಿಸಲಾಗಿದೆ.



ಇಲ್ಲಿನ ಆನೆಗಳು ಪ್ರವಾಸೋದ್ಯಮಕ್ಕೂ ನೆರವಾಗುತ್ತಿವೆ. ಅನುಕೂಲಕ್ಕೆ ತಕ್ಕಂತೆ ಹಲವು ಮಾದರಿಯ ಪ್ಯಾಕೇಜ್ ಇದ್ದು, ಆನೆಗಳ ಜೀವನಶೈಲಿ, ಆನೆಗಳು ಕೊಳಗಳಲ್ಲಿ ಸ್ನಾನ ಮಾಡುವ ರೀತಿ, ಆನೆಗಳಿಗೆ ಆಹಾರವನ್ನು ಪ್ರವಾಸಿಗರೇ ನೀಡುವ ಅವಕಾಶ ಮತ್ತು ಆನೆಯ ಮೇಲೆ ನಿಮ್ಮ ಸಮಯದ ಅನುಸಾರ ಸವಾರಿ ಮಾಡುವ ಅವಕಾಶ ನೀಡಲಾಗಿದೆ. ಆನೆಗಳ ನಿರ್ವಹಣೆಗೆ ಅಪಾರ ಹಣದ ಅನಿವಾರ್ಯತೆಯ ಹಿನ್ನೆಲೆಯಲ್ಲಿ ಪ್ರವಾಸಿಗರಿಂದ ಬರುವ ಆದಾಯವನ್ನು ಗ್ರಾಮದ ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತಿದೆ.

ಕೋಟೆಗೆ ಬರುವ ಪ್ರವಾಸಿಗರು 'ಹಾಥಿ ಗಾಂವ್'ಗೂ ಭೇಟಿ ನೀಡಬಹುದು. ಅಕ್ಟೋಬರ್‌ನಿಂದ ಮಾರ್ಚ್ ಸೂಕ್ತ ಸಮಯ. ಆನೆ ಗ್ರಾಮ ಹೊಕ್ಕು ಬಂದಲ್ಲಿ ಆನೆಯ ಪ್ರಪಂಚದಲ್ಲಿ ಒಂದು ವಿಹಾರ ಮಾಡಿದ ಅನುಭವ ನಿಮ್ಮದಾಗುವುದು ಖಚಿತ. ■